ಕಿನಲ್ಲಿ ಮಾಡಿಲ್ಲ. ನಮ್ಮ ತಹಶೀಲ್ದಾರರು ಸಣ್ಣ ರೈತರಿಗೆ ಇಲ್ಲದ ಸಲ್ಲದ ತೊಂದರೆಗಳನ್ನು, ಚಿತ್ರಹಿಂಸೆಯನ್ನು ಕೊಡುತ್ತಿರುವುದು ನನ್ನ ಕಣ್ಣಿದುರಿಗೆ ನಡೆದಿದೆ. ಇಂತಹ ಹಿಡುವಳಿದಾರರು ಇವತ್ತಿನದಿವಸ ಅನೇಕ ತೊಂದರೆಗಳಿಗೆ ಒಳಗಾಗಿದ್ದಾರೆ. ಈಗ ಮಾನ್ಯ ಮಂತ್ರಿಗಳು ಸರ್ಕ್ಯುಲರ್ ನಂಬರನ್ನು ಹೇಳಿದರು. ಅದನ್ನು ಅದಷ್ಟು ಜಾಗ್ರತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಬೇಕು ಅಂತ್ತ ನನ್ನ ಕೈಗೆ ಅದರ ಒಂದು ಕಾಪಿಯನ್ನು ಕೊಟ್ಟರೆ ನಮ್ಮ ಸಣ್ಣ ರೈತರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತೊಂದು ವಿಚಾರವೆಂದರೆ, ಹಿಡುವಳಿ ಭೂಮಿಯನ್ನು ಮಂಜೂರಾತಿ ಮಾಡಿದಾಗ ಪೋಡಿ ಪೀಸ್ ೪೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅಲ್ಲಿ ಅವರು ಡಿಮ್ಯಾಂಡ್ ಮಾಡಿ ತೆಗೆದುಕೊಳ್ಳುತ್ತಾ ಇದ್ದಾರೆ. ತಾವು ಇಷ್ಟನೇ ನಂಬರ್ ಸರ್ಕ್ಯುಲರ್ ಪ್ರಕಾರ ಅದನ್ನು ಕೈಬಿಟ್ಟಿದ್ದೀವೆಂದು ಹೇಳಿದ್ದೀರಿ. ಆದುದರಿಂದ ಇದನ್ನು ಅದಷ್ಟು ಬೇಗ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಈ ಹಿಡುವಳಿಗಾರರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಕೆ.ಎಚ್. ರಂಗನಾಥ್.—ಯಾವುದೇ ಕಾನೂನು ಮಾಡಿದರೂ ಮುಂದಕ್ಕೆ ಅನ್ವಯವಾಗುತ್ತದೆಯೇ ಹೊರತು ಹಿಂದಿನಿಂದ ಅನ್ವಯವಾಗುತ್ತದೆ ಎಂದು ಹೇಳಿದರೆ ಮಾತ್ರ ಹಿಂದಿನಿಂದ ಅನ್ವಯವಾಗುತ್ತದೆ. ಮಾನ್ಯ ಸದಸ್ಯರು ಅವರು ೧೦-೧೫ ವರ್ಷಗಳಿಂದ ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆಗ ಈ ಕಾನೂನು ಇಲ್ಲದೇ ಇದ್ದುದರಿಂದ ಅವರು ಕೊಡಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ವಿಷಯನ್ನು ಪ್ರಸ್ತಾಪಮಾಡಿದ್ದಾರೆ ಅದನ್ನು ಮಾನ್ಯ ರೆವಿನ್ಯು ಮಂತ್ರಿಗಳ ಗಮನಕ್ಕೆ ತಂದರೆ ಅವರು ಸೂಕ್ತವಾಗಿ ಪರಿಶೀಲನೆಮಾಡುತ್ತಾರೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಮಂತ್ರಿಗಳು ಯಾರಾದರೂ ಭೂಮಿಯನ್ನು ಬಗರ್‌ಹುಕುಂ ಮಾಡುತ್ತಿದ್ದರೆ ಒಂದು ವರ್ಷಕ್ಕೆ ಒಂದು ರೂಪಾಯಿ ತೆಗೆದುಕೊಳ್ಳುತ್ತಾ ಇದ್ದೇವೆ ಎಂದು ಹೇಳಿದರು. ಅವರು ೧೫–೨೦ ವರ್ಷಗಳಿಂದ ವ್ಯವಸಾಯ ಮಾಡುತ್ತಿರುವುದರಿಂದ ಹಿಂದಿನ ಪ್ರತಿವರ್ಷದ ಕಂದಾಯವನ್ನೂ ವಸೂಲುಮಾಡುತ್ತಿದ್ದಾರೆ ಇದರ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಕೆ.ಎಚ್. ರಂಗನಾಥ್.—ನಾನು ಸ್ಪಷ್ಟವಾಗಿ ತಿಳಿಸಲಿಲ್ಲ ಎಂದು ಕಾಣುತ್ತದೆ. ಕಾನೂನು ಮಾಡಿದಮೇಲೆ ಕಾನೂನು ಬಂದ ದಿವಸದಿಂದ ಮುಂದಕ್ಕೆ ಅದು ಅನ್ವಯವಾಗುತ್ತದೆ. ಅದರ ಹಿಂದೆ ಬಗರ್‌ಹುಕುಂ ಸಾಗು ಮಾಡುತ್ತಿದ್ದರೆ ಅದರ ಹಿಂದೆ ಏನು ಕಾನೂನು ಇರುತ್ತದೋ ಅದು ಅನ್ವಯವಾಗುತ್ತದೆ. ಕಾನೂನು ಮಾಡಿದ ಮೇಲೆ ಅದು ಹಿಂದಿನಿಂದ ಅನ್ವಯವಾಗಬೇಕು ಎಂದು ತಹಶೀಲ್ದಾರರಿಗೆ ಹೇಳಲಿಕ್ಕೂ ಸಾಧ್ಯವಾಗುವುದಿಲ್ಲ. ಅವರು ಮಾಡದೇ ಇರಲಿಕ್ಕೂ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಾರೆ ಅದನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದರೆ ಅವರು ಪರಿಶೀಲನೆಮಾಡುತ್ತಾರೆ.

(*ii*) *re: revision of fares and freight by the K.S.R.T.C. and the B.T.S.*

Sri M.V. Rajashekharan (Uttarahalli).—I raise the matter under rule 312 regarding revising the rates of fares and freight for all passenger buses run by K.S.R.T.C. including Bangalore Transport Service.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ವಿಷಯವಸ್ತುವನ್ನು ಕೇಳಿದ್ದಾರೆ.....

Sri T.R. Shamanna.—Regarding the matter under rule 312 a statement is being made by the Members and afterwards some clarification and reply is to be given by the Minister.....

Mr. Speaker.—The same matter has been raised by several Hon'ble Members.

† ಶ್ರೀ ಆರ್. ಗುಂಡೂರಾವ್ (ಸಾರಿಗೆ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಮಾನ್ಯ ಶಾಮಣ್ಣನವರನ್ನು, ಮಾನ್ಯ ರಾಮದೇವ್ ಅವರನ್ನೂ, ಮಾನ್ಯ ಚಂದ್ರ ಶೇಖರನ್ ಅವರನ್ನೂ ಹಾಗೂ ಮುಂತಾದವರನ್ನು ಕರೆದು ಮಾತನಾಡಿದ್ದೇನೆ. ಇವರು ಸಿಟಿ ಸದಸ್ಯರು ಇವರೊಡನೆ ಮಾತನಾಡಬೇಕು ಎಂದು ಕರೆದು ಮಾತನಾಡಿದ್ದೇನೆ, ಅವರೂ ಒಪ್ಪಿಕೊಂಡಿದ್ದಾರೆ. ಆದರೂ ಇಲ್ಲಿ ಇದನ್ನು ಕಳಿಸಿದ್ದಾರೆ. ಅಧ್ಯಕ್ಷರೇ, ಸರ್ಕಾರದವರು ಉದ್ದೇಶಪೂರ್ವಕವಾಗಿ ಬಸ್ಸಿನ ದರವನ್ನು ಜಾಸ್ತಿಮಾಡಬೇಕು ಎಂದು ಮಾಡಿದ್ದಲ್ಲ. ಸಂದರ್ಭ, ಸನ್ನಿವೇಶ ಆ ರೀತಿ ಇದೆ, ಆದುದರಿಂದ ಮಾಡಬೇಕಾಯಿತು. ತಮಗೆಲ್ಲಾ ಗೊತ್ತಿರುವಹಾಗೆ ಟ್ಯಾಕ್ಸೇಷನ್ ೫೦ ಪರ್ಸೆಂಟ್ ಜಾಸ್ತಿಯಾಗಿದೆ. ಡೀಸಲ್ ಕ್ರಯ ಜಾಸ್ತಿಯಾಗಿದೆ. ಟೈರು ಮುಂತಾದ ಸ್ಪೇರ್ ಪಾರ್ಟ್ಸ್ ಬೆಲೆ ಜಾಸ್ತಿಯಾಗಿದೆ. ಡಿ.ಎ. ಆರು ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ೧೯೭೫ನೇ ಇಸವಿಯಿಂದ ದರಗಳನ್ನು ರಿವೈಸ್ ಮಾಡಿಲ್ಲ. ಇವೆಲ್ಲವುಗಳ ದೃಷ್ಟಿಯಿಂದ ಜಾಸ್ತಿಮಾಡಬೇಕಾಯಿತು. ಒಂದು ಕಡೆ ಹೊಸ ಬಸ್ಸುಗಳನ್ನು ಕೇಳುತ್ತಿದ್ದಾರೆ ಈಗ ಹಳ್ಳಿಗಳಲ್ಲೂ ಮೋಟಾರು ವಾಹನಗಳು ಓಡಾಡುವ ರೋಡುಗಳಾಗಿವೆ. ಇವೆಲ್ಲವನ್ನೂ ಪರಿಶೀಲನೆಮಾಡಿ ಜನಗಳಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಬೇಕಂ ಎಂಬ ಉದ್ದೇಶದಿಂದ ಬಸ್ಸುಗಳ ಚಾರ್ಜನ್ನು ಜಾಸ್ತಿ ಮಾಡಿದೆಯೇ ಹೊರತು ಕೆ.ಎಸ್ ಆರ್.ಟಿ.ಸಿ. ಲಾಭ ಸಂಪಾದನೆ ಮಾಡ ಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛಪಡುತ್ತೇನೆ. ಕಳೆದ ೧೫ ದಿವಸಗಳಿಂದ ವರ್ಲ್ಡ್ ಆಯಿಲ್ ಮಾರ್ಕೆಟ್‌ನವರು ರೇಟನ್ನು ಜಾಸ್ತಿಮಾಡಬೇಕು ಎಂದು ಇದ್ದಾರೆ. ಅವರಂ ಜಾಸ್ತಿಮಾಡಿಬಿಟ್ಟರೆ ನಾವು ಪುನಃ ಜಾಸ್ತಿಮಾಡಬೇಕಾ ಗುತ್ತದೆ. ಬೆಂಗಳೂರು ನಗರದ ಜನರಿಗೆ ಹೆಚ್ಚಿನ ಬಸ್ ಸೌಕರ್ಯವನ್ನು ಒದಗಿಸಬೇಕು, ಮಿನಿ ಬಸ್ ಹಾಕಬೇಕು, ಎಕ್ಸ್‌ಪ್ರೆಸ್ ಬಸ್‌ಗಳು ಟಾಂಗಾ ಗಾಡಿ ಹೋಗುವ ಹಾಗೆ ನಿಧಾನವಾಗಿ ಹೋಗುತ್ತವೆ ಎಂದಂ ತಾವೆಲ್ಲಾ ಹೇಳಿದ್ದೀರಿ. ಜೋರಾಗಿ ಬಸ್‌ಗಳನ್ನು ಓಡಿಸಿದರೆ ಅಲ್ಲಿ ನಿಲ್ಲುವುದಿಲ್ಲ, ಬಹಳ ತೊಂದರೆ ಯಾಗುತ್ತದೆ ಎಂದಂ ಹೇಳಿದ್ದೀರಿ. ಇವನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಜನಗಳಿಗೆ ಹೆಚ್ಚು ಬಸ್ಸುಗಳ ಸೌಕರ್ಯವನ್ನು ಒದಗಿಸಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೇವೆಯೇ ಹೊರತು ಲಾಭ ಸಂಪಾದನೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ.

† ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಮಂತ್ರಿಗಳು ಹೇಳಿದ ಮಾತನ್ನು ಕೇಳಿ ಬಹಳ ವಿಷಾದ ವಾಗುತ್ತದೆ. ಬಸ್ಸಿನ ದರಗಳನ್ನು ರೈಸ್ ಮಾಡಿದ್ದಕ್ಕೆ ಹಲವಾರು ಕಾರಣಗಳನ್ನು ಮಾನ್ಯ ಮಂತ್ರಿಗಳು ಕೊಟ್ಟರು. ನಿಜವಾದ ಕಾರಣ, ಅವರು ಹೇಳಿದ ಪ್ರಕಾರ ಡೀಸಲ್ ಮೇಲೆ ಎಕ್ಸ್‌ಸೈಜ್ ಡ್ಯೂಟಿ ಜಾಸ್ತಿಯಾಯಿತು. ಬಾಕಿ ಕಾರಣಗಳನ್ನು ಕೊಟ್ಟರು, ಅವೆಲ್ಲಾ ಬಹಳ ಹಿಂದಿನಿಂದ ಇತ್ತು. ಬಸ್ಸಿನ ದರವನ್ನು ಹೆಚ್ಚಿಸುವುದಕ್ಕೆ ಪ್ರಮುಖವಾದ ಕಾರಣವೆಂದರೆ ಕೇಂದ್ರಸರ್ಕಾರದವರು ಡೀಸಲ್ ಮೇಲೆ ಎಕ್ಸ್‌ಸೈಜ್ ಡ್ಯೂಟಿಯನ್ನು ಹಾಕಿದ್ದಾರೆ ಎನ್ನುವುದು. ಎಷ್ಟು ಹಾಕಿದ್ದಾರೆ ಎಂದು ನೋಡೋಣ. ಅವರು ಹಾಕಿರತಕ್ಕದ್ದು ಲೀಟರ್‌ಗೆ ೧೦ ಪೈಸೆ ಯಾದರೆ ಟೋಟಲ್ ಪರ್ಸೆಂಟೇಜ್ ವರ್ಕೌಟ್ ಮಾಡಿದರೆ ೮ ಪರ್ಸೆಂಟ್ ಆಗಂತ್ತದೆ. ಆದರೆ ಇವರು ೩೦ ರಿಂದ ೪೫ ಪರ್ಸೆಂಟ್ ರೈಸ್ ಮಾಡಿದ್ದಾರೆ. ರೈಸ್ ಮಾಡುವುದಾದರೆ ಪ್ರಪೋರ್ಷನೇಟಾಗಿ ಮಾಡಲಿ, ಒಪ್ಪಿಕೊಳ್ಳೋಣ. ಕೇಂದ್ರಸರ್ಕಾರದವರು ಎಕ್ಸೈಜ್ ಡ್ಯೂಟಿ ಹಾಕಿರುವುದಕ್ಕೂ ಇವರು ರೈಸ್ ಮಾಡಿರುವುದಕ್ಕೂ ಏನೇನೂ ಸಂಬಂಧವಿಲ್ಲ. ಜನಗಳಿಗೆ ತೊಂದರೆ ಕೊಡಬಾರದು ಎಂದು ಜನಗಳಿಂದ ಲೂಟಿ ಮಾಡುತ್ತಿದ್ದಾರೆ. ಇವತ್ತಿನದಿವಸ ಸರ್ಕಾರ ಜನ ಗಳನ್ನು ಶೋಷಣೆ ಮಾಡಿದಷ್ಟು ಇನ್ಯಾರೂ ಮಾಡುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಏತಕ್ಕೆಂದರೆ ಸರ್ಕಾರದವರೇ ಜನಗಳ ಹಿತಾಶಕ್ತಿಯನ್ನು ಕಾಪಾಡಬೇಕಾದುದು ಬಹಳ ಮುಖ್ಯ ವಾದುದು. ಅಂಥಾದ್ದರಲ್ಲಿ ಬೇಲಿಯೇ ಎದ್ದು ಹೊಲವನ್ನು ಮೇಯ್ದರೆ ಹೇಗೆ? ಯಾರ ಹತ್ತಿರ ಕಷ್ಟ ಹೇಳಿಕೊಂಡರೇ ಪರಿಹಾರವಾಗಬೇಕೋ ಅವರಿಂದಲೇ ಆಗದಿದ್ದರೆ ಏನು ಪ್ರಯೋಜನ? ನಾವು ಏನೋ ಬೆಂಗಳೂರು ನಗರದಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ಸಂಪಾದನೆ ಮಾಡಿಕೊಂಡು ಕೊಟ್ಟು ಹೋಗುವುದಕ್ಕೆ ಸಿದ್ಧರಾಗಿದ್ದೇವೆ, ಆದರೆ ಬೆಂಗಳೂರು ನಗರದ ಶಾಸಕರಾದ ಶ್ರೀ ಶಾಮಣ್ಣನವರು ಮತ್ತು ಶ್ರೀ ಪಿ. ರಾಮದೇವ್‌ರವರು ಇದರ ಬಗ್ಗೆ ಸವಿಸ್ತಾರವಾಗಿ ಹೇಳುವವರಿದ್ದಾರೆ. ಇವತ್ತು ನಾನು ತಮಗೊಂದು ಉದಾಹರಣೆಗೆ ಹೇಳುವುದಾದರೆ ಜಯನಗರದ ೪ನೇ ಬ್ಲಾಕ್‌ನಿಂದ ಮಾರ್ಕೆಟ್ಟಿಗೆ ಹೋಗಬೇಕಾದರೆ ಎಷ್ಟು ಹೆಚ್ಚಿಗೆ ಕೊಡಬೇಕಾಗಿದೆ ಎನ್ನುವ ಬಗ್ಗೆ ಮಾನ್ಯ ಶಾಮಣ್ಣನವರು ತಿಳಿಸುತ್ತಾರೆ.

೩-೦೦ ಪಿ. ಎಂ.

ಆದೇ ರೀತಿ ಕೆಂಗೇರಿ ಸೆಟ್‌ಲೈಟ್‌ನಿಂದ ಮೆಜೆಸ್ಟಿಕ್‌ಗೆ ಬರಬೇಕಾದರೆ ೮೦ ಪೈಸೆ ಇದ್ದುದು ೧ ರೂಪಾಯಿ ೫ ಪೈಸೆಯಾಗಿದೆ ಅಂದರೆ ೩೦ ಪರ್ಸೆಂಟ್ ರೈಜ್ ಮಾಡಿದ್ದೀರಿ. ಇದಕ್ಕೆ ತಾವು ಕಾರಣ ಹೇಳುವುದು ಡೀಜಲ್ ಮತ್ತು ಎಕ್ಸ್‌ಪೆಜ್‌ನ ಮೇಲೆ ಸಂಕ ಜಾಸ್ತಿಯಾಗಿದೆಯೆಂದು. ಆದರೆ ನಿಜವಾಗಿಯೂ ಆಗಿರುವುದು ಕೇವಲ ೮ ಪರ್ಸೆಂಟ್, ಆದರೆ ನೀವು ರೈಜ್ ಮಾಡಿರುವುದು ೩೦ ಪರ್ಸೆಂಟ್. ಇದು ಅನಾವಶ್ಯಕವಾಗಿತ್ತು. ಇವತ್ತಿನ ದಿವಸ ಕೆ.ಎಸ್.ಆರ್ ಟಿ.ಸಿ ಮತ್ತು ಬಿ.ಟಿ.ಎಸ್.ನಲ್ಲಿ ಸಾವಿರಾರು ರೂಪಾಯಿಗಳು ಲುಕ್ಸಾನು ಆಗುತ್ತಿದೆ. ಲೂಟಿಯಾಗುತ್ತಿದೆ, ಅದನ್ನು ನೀವು ಪ್ರಯತ್ನಿಸುವುದಕ್ಕೆ ಪತಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಕೇಳುತ್ತೇನೆ. ಸ್ವಾಮಿ ಇವತ್ತು ನಾವು ಬೆಂಗಳೂರು ನಗರದಲ್ಲಿ ಬಸ್ ಕಂಡಕ್ಟರ್‌ಗಳು ಮನೆಗಳನ್ನು ಕಟ್ಟಿಸಿರುವುದನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ನಾವು ಹಳ್ಳಿಗಳಲ್ಲಿ ರಾತ್ರಿ ಹಗಲೂ ದುಡಿದು ವ್ಯವಸಾಯ ಮಾಡಿ, ಎಷ್ಟೇ ಸಂಪಾದನೆ ಮಾಡಿದರೂ ಅಂಥಾ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳವರು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ಹೆಚ್ಚು ಲಕ್ಷ್ಯವನ್ನು ಕೊಟ್ಟು ಜನಗಳಿಗೆ ಅನುಕೂಲವನ್ನು ಮಾಡಿಕೊಡಬೇಕು ಗ್ರಾಮಾಂತರ ಪ್ರದೇಶಗಳ ವಿಚಾರ ಹೇಳುವುದಾದರೆ ನಮ್ಮ ಹಳ್ಳಿಗಳಲ್ಲಿ ರೈತರುಗಳು ಬಸ್‌ಗಳಿಲ್ಲದೇ ಒಂದು ವಿದದಲ್ಲಿ ತೊಂದರೆ ಪಡುತ್ತಿರುವಾಗ, ಅವರು ಆ ಒಂದು ಕಷ್ಟವನ್ನು ಅನುಭವಿಸುತ್ತಿರುವಾಗ ಗಾಯದ ಮೇಲೆ ಉಪ್ಪನ್ನು ಹಾಕುವ ಹಾಗೆ ಇವತ್ತು ನೀವು ರೇಟನ್ನು ಹೆಚ್ಚಿಸಿದ್ದೀರಿ. ಆದುದರಿಂದ ತಾವು ಆ ಜನಗಳಿಗೆ ಯಾವ ರೀತಿಯ ಅನುಕೂಲವನ್ನು ಮಾಡಿಕೊಡುತ್ತೀರಿ? ಎಂಬುದನ್ನು ತಿಳಿಸಬೇಕಾಗುತ್ತದೆ, ನಾವು ಜನಗಳ ಪ್ರತಿನಿಧಿಗಳಾಗಿ ನಿಮ್ಮ ಹತ್ತಿರವಲ್ಲದೇ ಇನ್ನು ಯಾರ ಹತ್ತಿರ ಹೇಳಿಕೊಳ್ಳಬೇಕು? ಆದುದರಿಂದ ಮಾನ್ಯ ಮಂತ್ರಿಗಳವರು ಏನು ಲೂಟಿಯಾಗುತ್ತಿದೆ ಅದನ್ನು ತಪ್ಪಿಸಿ ಜನಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಇನ್ನು ಹೆಚ್ಚಿನ ವಿಷಯವನ್ನು ಇದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳುವವರಿರುವುದರಿಂದ, ಕೊನೆಯದಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಕೇಂದ್ರದವರು ೮ ಪರ್ಸೆಂಟ್ ರೈಜ್ ಮಾಡಿದ್ದಾರೆಂದು ನೀವು ಅದಕ್ಕೆ ಪ್ರೊಪೋಷಿನೇಟ್ ಆಗಿ ಹಾಕಿ, ಆದರ ಬದಲು ಈಗ ಹಾಕಿರುವುದು ೩೦.೪೦ ಪರ್ಸೆಂಟ್ ಏನಿದೆ ಆ ರೀತಿ ಹಾಕುವುದಕ್ಕೆ ಹೋಗಬೇಡಿ ಎಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನ ಗುಡಿ).—ಮಾನ್ಯ ಸಭಾಪತಿಗಳೇ, ನಮ್ಮ ಯುವ ಸಾರಿಗೆ ಮಂತ್ರಿಗಳವರು ಹಿಂದೆ ಇನ್ನೂ ಹುಟ್ಟಿರಲಿಲ್ಲವೆಂದು ಕಾಣುತ್ತದೆ. ಆಗ ಶ್ರೀ ಗರುಡಾಚಾರ್, ಶ್ರೀ ಶಣ್ಮುಗಂ ಮತ್ತು ಶ್ರೀ ನಾರಾಯಣರಾವ್ ಎನ್ನುವ ೩ ಜನ ಸೇರಿ ಸಿಟಿ ಬಸ್ಸ್‌ನ್ನು ನಡೆಸುತ್ತಿದ್ದರು. ಮೊದಲು ಸಿಟಿ ಬಸ್ ಸರ್ವಿಸ್ ೪೫ ವರ್ಷಗಳ ಹಿಂದೆಯೇ ಶುರುವಾಗಿತ್ತು. ಆಗ ಬಸವನಗುಡಿಯಿಂದ ಹಿಡಿದು ಸಿಟಿಮಾರ್ಕೆಟ್‌ವರೆಗೆ ೬ ಕಾಸು ಮತ್ತೆ ಬಸವನಗುಡಿಯಿಂದ ಮಲ್ಲೇಶ್ವರಂಗೆ ಒಂದೂವರೆ ಆಣೆ ಇತ್ತು. ಆಗ ಬೆಳಿಗ್ಗೆ ಮೈಸೂರಿನಿಂದ ಬೆಂಗಳೂರಿಗೆ ರೈಲು ೫½ ಘಂಟೆಗೆ ಬರುತ್ತಿದೆಂದರೆ ಅವರ ಬಸು ಆಗಲೇ ಹೋಗಿ ಕಾದು ಕೊಂಡಿರುತ್ತಿತ್ತು, ಸ್ವಾಮಿ ಆದು ಎಲ್ಲಾ ಹೋಗಲಿ ಆದಾದ ಮೇಲೆ ಬಿ.ಟಿ.ಎಸ್. ಕಂಪನಿ ಅಂತ ಆಯಿತು ಅದು ಆದಾಗ ಆವತ್ತಿನ ದಿವಸ ಒಂದು ಶೇರ್ ಬೆಲೆ ೧೦ ರೂಪಾಯಿ ಇದ್ದರೆ ಬಜಾರಿನಲ್ಲಿ ೩೦ ರೂಗಳ ಹಾಗೆ ಆ ಶೇರು ಮಾರಾಟವಾಗುತ್ತಿತ್ತು. ಅಂದರೆ ಅಷ್ಟು ಲಾಭದಾಯಕವಾಗಿತ್ತು. ಆದರೆ ಇವತ್ತು ಆ ಒಂದು ಉದ್ದಿಮೆ ಪ್ರತಿ ವರ್ಷವೂ ಕೂಡ ಹೆಚ್ಚು ಹೆಚ್ಚು ಲಾಸ್ ಆಗುತ್ತಾ ಹೋಗುತ್ತಿದೆ. ಈ ರೀತಿ ಆಗುತ್ತಿರುವುದು ಸರಿಯೇ ಎಂದು ಕೇಳಬೇಕಾಗಿದೆ. ತಾವು ಏನೋ ಹೇಳಬಹುದು ಬಸ್‌ಗಳ ಬೆಲೆ ಜಾಸ್ತಿಯಾಗಿದೆಯೆಂದು, ಆದರೆ ಇವತ್ತು ಖಾಸಗಿ ಸಂಸ್ಥೆಗಳವರು ನಡೆಸುತ್ತಿರುವ ಬಸ್‌ಗಳಿಂದ ಅವರಿಗೆ ಹೆಚ್ಚಿನ ಲಾಭವೇ ಸಿಗುತ್ತಿದೆ. ಆದರೆ ನಿಮ್ಮ ಬಸ್‌ಗಳಿಂದ ಮಾತ್ರ ಪತಕ್ಕೆ ನಷ್ಟವಾಗುತ್ತಿದೆ ಎನ್ನುವ ಬಗ್ಗೆ ತಾವು ಧೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ತಾವು ಬಸ್‌ಗಳ ದರವನ್ನು ಹೆಚ್ಚಿಸುವುದಕ್ಕಿಂತ ಮುಂಚೆ ಎಲ್ಲೆಲ್ಲಿ ಲಾಸ್ ಆಗುತ್ತಿದೆ, ಕಂಡಕ್ಟರ್‌ಗಳ ಪಾತ್ರವೆಷ್ಟು? ವರ್ಕ್‌ಷಾಪ್‌ನಲ್ಲಿ ಎಷ್ಟು ಲಾಸ್ ಆಗುತ್ತಿದೆ, ಇನ್ನು ಸಾಮಾನುಗಳ ಪರ್ಚೇಜಿಂಗ್‌ನಲ್ಲಿ ಎಷ್ಟು ಲಾಭ ನಷ್ಟವಾಗುತ್ತಿದೆಂಬುದನ್ನು ತಾವು ನೋಡದೆ ಬಸ್‌ಗಳ ದರವನ್ನು ಮಾತ್ರ ಹೆಚ್ಚಿಸುತ್ತಾ ಹೋದರೆ ಇದರಿಂದ ಇನ್ನಷ್ಟು ಇನ್ ಎಫಿಸಿಯೆನ್ಸಿ ಹೆಚ್ಚಿ ಕರ್ಪಷನ್ ಹೆಚ್ಚಾಗುತ್ತದೆ. ಇವತ್ತು ಪೆಟ್ರೋಲ್ ಡೀಜಲ್ ಬೆಲೆ ಹೆಚ್ಚಿರುವುದು ಕೇವಲ ೮ ಪರ್ಸೆಂಟ್ ಇದರಿಂದ ನಿಮಗೆ ಆಗತಕ್ಕ ಲಾಸ್ ೧೩

ಐ ಲಕ್ಷ ರೂಪಾಯಿಗಳು ಮಾತ್ರ ಆದಕ್ಕೆ ನೀವು ಇವತ್ತಿನ ದಿನ ಹೆಚ್ಚು ಮಾಡಿರತಕ್ಕ ರೇಟಿನಿಂದ ೩ ಕೋಟಿ ಆದಾಯ ಹೆಚ್ಚಿಗೆ ಬರುತ್ತಿದೆ. ಇಷ್ಟು ಹೆಚ್ಚು ಮಾಡುವುದು ನ್ಯಾಯವೇ ಎನ್ನುವ ಬಗ್ಗೆ ಯೋಚನೆ ಮಾಡಿ. ಟೈರ್‌ಗಳ ಬೆಲೆ ಹೆಚ್ಚಾಗಿರಬಹುದು. ಲೇಬರರ್ಸ್ ಸಂಬಳ ಹೆಚ್ಚು ಆಗಿರಬಹುದು, ಆದನ್ನೆಲ್ಲಾ ಲೆಕ್ಕಾಚಾರ ಮಾಡಿ ಯಾವಯಾವುದರಲ್ಲಿ ಎಷ್ಟೆಷ್ಟು ಹೆಚ್ಚು ಆಗಿದೆ ಎನ್ನುವ ಬಗ್ಗೆ ನೋಡಿ ಎಷ್ಟು ಹೆಚ್ಚಿಗೆ ಮಾಡಬಹುದೆನ್ನುವ ಬಗ್ಗೆ ಮಾನ್ಯ ಶ್ರೀ ಗುಂಡೂರಾಯರು ಯುವಕರಾಗಿರುವುದರಿಂದ ಅವರು ಈ ಕಾರ್ಯವನ್ನು ಮಾಡಬಹುದಾಗಿತ್ತು. ಕೇವಲ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ ಎನ್ನುವ ಒಂದೇ ಕಾರಣಕ್ಕೆ ಒಂದಕ್ಕೆ ನಾಲ್ಕರಷ್ಟು ಹೆಚ್ಚಿಸುವುದು ನ್ಯಾಯವೇ ನೀತಿಯೇ, ಧರ್ಮವೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪೆಟ್ರೋಲ್ ಬೆಲೆ ಹೆಚ್ಚಿಸುವುದಕ್ಕೆ ಮೊದಲೇ ಅವರು ಈ ನಿರ್ಣಯವನ್ನು ತೆಗೆದುಕೊಂಡಿದ್ದರೆಂದು ಕಾಣುತ್ತೆ.

ಶ್ರೀ ಟಿ. ಆರ್. ಶಾಮಣ್ಣ.—ಇವತ್ತು ತಾವು ಬೇಕಾದರೆ ಎರಡು ಲೈನ್‌ಗಳಲ್ಲಿ ಬಸ್‌ಗಳನ್ನು ಓಡಿಸಲು ಖಾಸಗಿಯವರಿಗೆ ಬಿಟ್ಟುಕೊಡಿ. ಅವರು ನಿಮಗಿಂತ ಎರಡರಷ್ಟು ಲಾಭವನ್ನು ತೋರಿಸಲು ಕೊಡಲು ಸಿದ್ಧರಿದ್ದಾರೆ. ಅವರೇನಾದರೂ ತಪ್ಪು ಮಾಡಿದರೆ ಶಿಕ್ಷೆ ಕೊಡುವುದಕ್ಕೆ ನಿಮಗೆ ಅಧಿಕಾರ ವಿದೆ ಅದಕ್ಕಾದರೂ ತಾವು ಅವಕಾಶ ಮಾಡಿಕೊಡಿ. ಆದುದರಿಂದ ಇದು ಯುವಕ ಮಂತ್ರಿಗಳಾದ ನಿಮ್ಮ ಆಡಳಿತ ಕಾಲದಲ್ಲಿಯಾದರೂ ಸರಿಯಾಗದೇ ಮತ್ತೆ ಇನ್ನು ಯಾವ ಕಾಲದಲ್ಲಿ ಆಗಬೇಕು? ತಾವೇ ಯೋಚನೆ ಮಾಡಿ. ನಾವು ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡಿ ಹೇಳುತ್ತಿರುವುದಕ್ಕೆ ಕಾರಣ ವಿಷ್ಟೇ. ಬಸ್‌ಗಳ ದರ ಹೆಚ್ಚಿಸಿದರೂ ಜನಗಳು ಫುಟ್ ಬೋರ್ಡಿನ ಮೇಲೆ ನಿಂತುಕೊಂಡು ಓಡಾಡುವುದು ತಪ್ಪಿದೆಯೇ? ಮತ್ತೆ ಜನಗಳು ಮೈಲಿಗಟ್ಟಲೆ ಕ್ಯೂನಲ್ಲಿ ನಿಲ್ಲುವುದು ತಪ್ಪಿದೆಯೇ ಮತ್ತು ಜನಗಳು ಬಸ್‌ಗಳ ಒಳಗೇ ಒಬ್ಬರ ಮೇಲೆ ಒಬ್ಬರು ಬೆನ್ನು ಕೊಂಡು ಹೋಗುವುದು ತಪ್ಪಿದೆಯೇ, ಬಸ್‌ಗಳ ಅಪಘಾತಗಳು ಕಡಿಮೆಯಾಗಿದೆಯೇ? ಬಸ್ ಕಂಡಕ್ಟರ್‌ಗಳು ಕದಿಯುವುದನ್ನೇನಾದರೂ ಕಡಿಮೆಯಾಗಿದೆಯೇ? ಇವುಗಳೆಲ್ಲದರ ಬಗ್ಗೆ ತಾವು ಯೋಚನೆ ಮಾಡಿ ಜನಗಳಿಗೆ ಸೌಕರ್ಯವನ್ನು ಮಾಡಿಕೊಟ್ಟು ಹೆಚ್ಚು ದರವನ್ನು ಮಾಡಿದ್ದರೆ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೆವು. ಆದರೆ ಇವತ್ತು ಏನಾಗಿದೆಂದರೆ ಅಧಿಕಾರಿಗಳು ಕಾರಿನಲ್ಲಿ ಓಡಾಡುವುದರಿಂದ ಜನಗಳ ಕಷ್ಟವೇನೆಂಬುದೇ ಗೊತ್ತಾಗುವುದಿಲ್ಲ. ತಮ್ಮಲ್ಲಿ ಕೇಳಿಕೊಳ್ಳುವುದೆಂದರೆ ತಾವು ಹೆಚ್ಚಿಸಿರುವ ಬಸ್ ದರ ವೈಜ್ಞಾನಿಕವೆಂದು ಅನ್ನುವುದು ನ್ಯಾಯಸಮ್ಮತವಾದುದಲ್ಲ. ಯಾಕೆಂದರೆ ದ ಇಡಕ್ಕೆ ಒಬ್ಬ ಕಾಸ್ಟ್ ಅಕೌಂಟೆಂಟ್‌ನ್ನು ಇಟ್ಟು ಎಷ್ಟು ಲಾಸ್ ಆಗುತ್ತದೆ ಎಷ್ಟು ಲಾಭವಾಗುತ್ತದೆಂಬುದನ್ನು ನೋಡಿ ಮಾಡುವುದು ಒಳ್ಳೆಯದು ಅದನ್ನು ಬಿಟ್ಟು ಅಧಿಕಾರಿಯೊಬ್ಬನು ಈ ರೀತಿ ಯದ್ವಾ ತದ್ವಾ ಹಾಕುವುದು ಸರಿಯಲ್ಲ. ನಾನು ಇಲ್ಲಿ ೧೩ ವರ್ಷಗಳಿಂದ ಸದಸ್ಯನಾಗಿ ಪ್ರತಿ ವರ್ಷವೂ ಈ ಸದನದಲ್ಲಿ ತಂದು ಪ್ರಸ್ತಾಪ ಮಾಡುತ್ತಲೇ ಇದ್ದೇನೆ ಆದರೆ ಇನ್ನೂ ಪರಿಹಾರ ಸಿಕ್ಕಿಲ್ಲ. ಆದುದರಿಂದ ಕೊನೆಯದಾಗಿ ಬಸ್ ದರವನ್ನು ಕಡಿಮೆ ಮಾಡಿ ಜನಗಳಿಗೆ ಇನ್ನು ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡಿ ಎಂದು ನಿಮ್ಮಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜಶೇಖರನ್ ರವರೂ ಮತ್ತು ಶ್ರೀ ಶಾಮಣ್ಣನವರೂ ಹೇಳಿರತಕ್ಕದ್ದನ್ನು ಸಮರ್ಥಿಸುತ್ತಾ ನಮ್ಮ ಮಾನ್ಯ ಮಂತ್ರಿಗಳವರು ಕೊಟ್ಟಿರತಕ್ಕ ಉತ್ತರ ಸಮರ್ಪಕವಾದುದಲ್ಲವೆಂದು ಹೇಳಬೇಕಾಗಿದೆ. ಎತಕ್ಕೋ ಅವರು ಅಂಕಿಅಂಶಗಳನ್ನು ಕೊಡಲಿಲ್ಲ. ಹಿಂದೆ ಅವರು ಸ್ಟೇಟ್ ಲೆಜಿಸ್ಲೇಚರ್ಸ್‌ನ್ನು ಮೀಟಿಂಗ್‌ಗೆ ಕರೆದಾಗ ಎಲ್ಲಾ ಕೂಲಂಕುಷವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಅಲ್ಲಿ ನಾವು ಆವರೂ ಎದುರುಬದಿರಿನಲ್ಲಿ ಕೂತು ಚರ್ಚೆ ಮಾಡಿದ್ದೇವೆ. ಬಹುಶಃ ಇನ್ನು ಒಂದು ಗಂಟೆ ಇದ್ದಿದ್ದರೆ ಅವರು ನಮ್ಮ ವಾದವನ್ನು ಒಪ್ಪಿಕೊಳ್ಳುತ್ತಿದ್ದರೇನೋ ಆದರೇ ಕೊನೇ ಘಳಿಗೆಯಲ್ಲಿ ಎಲ್ಲೋ ಅರ್ಜೆಂಟ್ ಹೋಗಬೇಕಾಗಿ ಒಂದುದರಿಂದ ಇನ್ನೊಮ್ಮೆ ಕೂತುಕೊಂಡು ಅದರ ಬಗ್ಗೆ ತೀರ್ಮಾನ ಮಾಡೋಣ ವೆಂದು ಹೇಳಿದ್ದಾರೆ. ನಾನಾದರೂ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ ನಗರದಲ್ಲಿ ಸುಮಾರು ಎಳೂವರೆ ಲಕ್ಷ ಜನ ದಿನವಹೀ ನಿಮ್ಮ ಬಸ್‌ನಲ್ಲಿಯೇ ಓಡಾಡುತ್ತಿದ್ದಾರೆ ತಾವು ಸ್ವಲ್ಪ ವೇಷ ಒದಲಾಯಿಸಿಕೊಂಡು ನಿಮ್ಮ ಬಸ್ಸ್‌ನಲ್ಲಿ ಓಡಾಡಿದರೆ ಆ ಬಸ್ಸ್‌ಗಳಲ್ಲಿ ಹೆಂಗಸರು, ಅಬಲೆಯವ್ವದ್ದರಾಗಿ ನಿಮ್ಮನ್ನು ಬೈಯುತ್ತಿರುವುದು ಸ್ಪಷ್ಟವಾಗಿ ನಿಮಗೆ ಗೊತ್ತಾಗುತ್ತದೆ. ಒಂದು ಕಡೆ ಸೌಕರ್ಯ ಇಲ್ಲ, ಇನ್ನೊಂದು ಕಡೆ ಬಸ್ಸ್‌ಗಳು ಜಾಸ್ತಿ ಇಲ್ಲ. ಹೀಗಾಗಿ ಇವತ್ತಿನ ದಿವಸ ಬಹಳ ಕಷ್ಟವಾಗಿದೆ. ಹೀಗೆಯೇ ಮುಂದು

ವರಿದರೆ ಚಳುವಳಿಯಾಗುತ್ತದೆ. ದಯವಿಟ್ಟು ಅದಕ್ಕೆಲ್ಲ ಅವಕಾಶ ಕೊಡದೇ ಇದ್ದು ಎಂದು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ ಈಗಾಗಲೇ ಚಳುವಳಿ ಕೂಡ ಶುರುವಾಗಿದೆ. ಒಂದು ಕಡೆ ಜನತಾದವರು, ಇನ್ನೊಂದು ಕಡೆ ಕನ್ನಡ ಚಳುವಳಿಗಾರರು ಮಾಡುತ್ತಿದ್ದಾರೆ. ಮತ್ತೊಂದು ಕಡೆ ಸಿ.ಪಿ.ಎಂ. ನವರು ಮಾಡಿ ೫೦೦ ಮಂದಿ ಅರೆಸ್ಟ್ ಆಗಿದ್ದಾರೆ. ಇಡೀ ರಾಜ್ಯದ್ಯಂತ ಚಳುವಳಿಗೆ ಅವಕಾಶ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ತಾವು ರಿವಿಜನ್ ಮಾಡಿರತಕ್ಕದ್ದರ ಶಾಸ್ತ್ರೀಯವಾಗಿ ಇಲ್ಲ. ತಮ್ಮ ಗಡಿ ಬಿಡಿಯಲ್ಲಿ ಅಧಿಕಾರಿಗಳು ಕೊಟ್ಟಂತೆ ಮಾಡಿದ್ದೀರಿ. ಕಡಿಮೆ ಮಾಡುವ ಅವಕಾಶ ಇದೆ. ತಾವು ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದೀರಿ. ದಯವಿಟ್ಟು. ನಮ್ಮನ್ನೆಲ್ಲ ಇನ್ನೊಮ್ಮೆ ಕರೆಸಿ ವಿಚಾರಮಾಡಿ ಅಂಕಿಅಂಶಗಳನ್ನಿಟ್ಟುಕೊಂಡು ದರವನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರ ನಷ್ಟ ಮಾಡಿಕೊಳ್ಳಬೇಕೆಂದು ಹೇಳುವುದಿಲ್ಲ. ಎಷ್ಟು ಪ್ರಮಾಣದಲ್ಲಿ ಬೆಲೆ ಜಾಸ್ತಿಯಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ದರವನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಒಂದೆರಡು ದೇಶಗಳನ್ನು ಬಿಟ್ಟರೆ ಪ್ರಪಂಚದಲ್ಲಿ ಎಲ್ಲಿಯೂ ಸಾರಿಗೆ ವ್ಯವಸ್ಥೆ ಪ್ರಾಫಿಟಬಲ್ ಆಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಹಣ ತೆಗೆದುಕೊಂಡು ಪ್ರಯಾಣಿಕರಿಗೆ ತೊಂದರೆಯಾಗದಂತೆ ರೇಟನ್ನು ರಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ರಾಮೇ ದೇವರ್‌ರವರು ಹೇಳಿದ ಹಾಗೆ ಇದರಲ್ಲಿ ಮೊದಲನೇ ಸ್ಟೇಜಿಗೆ ೨ ಕಿಲೋ ಮೀಟರ್ ಎಂದೂ, ಎರಡನೆ ಸ್ಟೇಜಿಗೆ ೪ ಎಂದೂ ಹೀಗೆ ೬–೮–೧೦ ಕಿಲೋ ಮೀಟರ್‌ಗಳಿಗೆ ಒಂದೊಂದು ಸ್ಟೇಜುಗಳಿವೆ. ಸಾಮಾನ್ಯವಾಗಿ ೨ರಿಂದ ೧೦ ಕಿಲೋ ಮೀಟರ್‌ವರೆಗೆ ಶೇಕಡ ೭೫ರಷ್ಟು ಜನ ಪ್ರಯಾಣಿಕರಿರುತ್ತಾರೆ. ಅದರ ದರ ಏರಿಕೆ ಮಾಡಿರುವುದು ಶೇಕಡ ೩೦–೪೦ರಷ್ಟು. ಮಂತ್ರಿಗಳೇ ಹೇಳಿದ ಹಾಗೆ ಡೀಸಲ್ ಮತ್ತು ಸ್ಪೇರ್ ಪಾರ್ಟ್ಸ್ ಬೆಲೆ ಶೇಕಡ ೧೦೦–೧೨೦ರಷ್ಟು ಜಾಸ್ತಿಯಾಗಿದೆ. ಇವರು ಏರಿಕೆ ಮಾಡಿರುವಷ್ಟೇನು ಜಾಸ್ತಿಯಾಗಿಲ್ಲ. ಡೀಸಲ್, ಸ್ಪೇರ್ ಪಾರ್ಟ್ಸ್ ಬೆಲೆ ಜಾಸ್ತಿಯಾಗಿದ್ದು ಹಾಗೂ ಕಾರ್ಮಿಕರಿಗೆ ಬೋನಸ್ ಕೊಡಬೇಕಾಗಿದ್ದರೂ ಕೂಡ ಏರಿಕೆ ಮಾಡಿರುವ ದರದಲ್ಲಿ ಬಿ.ಟಿ.ಎಸ್.ಗೆ ವರ್ಷಕ್ಕೆ ೩ ಕೋಟಿ ರೂಪಾಯಿ ಲಾಭ ಬರುತ್ತದೆ. ಈ ಬಗ್ಗೆ ಅಧಿಕಾರಿಗಳನ್ನು ಮತ್ತು ಮಾನ್ಯ ಮಂತ್ರಿಗಳನ್ನು ಕೇಳಿದ್ದಕ್ಕೆ ಡೀಸಲ್ ಮತ್ತು ಸ್ಪೇರ್ ಪಾರ್ಟ್ಸ್‌ಗಳಿಗೆ ಬೆಲೆ ಜಾಸ್ತಿಯಾಗಿರುವ ವಿಚಾರವಲ್ಲ ಹೊಸ ಬಸ್ಸುಗಳನ್ನು ಕೊಂಡು ಕೊಳ್ಳಬೇಕಾಗಿದೆ ಬಸ್ ದರವನ್ನು ಏರಿಸದಿದ್ದರೆ ಅದನ್ನು ಯಾವ ರೀತಿ ಕೊಂಡುಕೊಳ್ಳುವುದು ಎಂದರು. ಆದರೆ ಮಾನ್ಯ ಆರ್ಥ ಮಂತ್ರಿಗಳು, ಅವರ ಈ ವರ್ಷದ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ ಹೆಚ್ಚಿನ ಬಸ್ಸುಗಳನ್ನು ಕೊಂಡುಕೊಳ್ಳುವ ಬಗ್ಗೆ ಅವಶ್ಯಕತೆ ಇರುವಷ್ಟು ಧನವನ್ನು ಸಹಾಯ ರೂಪದಲ್ಲಿ ನೀಡಲು ಸರ್ಕಾರ ಉದ್ದೇಶಿಸಿದೆ ಎಂದು ಆದಕಾರಣ ಸರ್ಕಾರ ಉದ್ದೇಶ ಮಾಡಿರುವುದರಿಂದ ಕೇವಲ ಪ್ರಯಾಣಿಕರಿಂದ ವಸೂಲಾಗಿಬಿಡುವ ಹಣದಿಂದ ಹೊಸ ಬಸ್ಸುಗಳನ್ನು ಕೊಳ್ಳಬೇಕಾಗಿಲ್ಲ. ಸರ್ಕಾರ ಹೊಸದಾಗಿ ೮೦೦ ಬಸ್ಸುಗಳನ್ನು ಕೊಂಡುಕೊಳ್ಳಲು ಬೇರೆ ವ್ಯವಸ್ಥೆ ಮಾಡಿದೆ. ಆದ್ದರಿಂದ ಡೀಸಲ್, ಸ್ಪೇರ್‌ಪಾರ್ಟ್ಸ್ ಬೆಲೆ ಏರಿಕೆ ಮತ್ತು ಕಾರ್ಮಿಕರಿಗೆ ಕೊಡಬೇಕಾದ ಹೆಚ್ಚಿನ ಸಂಬಳಕ್ಕೆ ಸೀಮಿತವಾದಷ್ಟು ಮಾತ್ರ ದರವನ್ನು ಏರಿಕೆ ಮಾಡಬೇಕೆಂದು ಹೇಳುತ್ತೇನೆ. ೪ ಕಿಲೋ ಮೀಟರಿನಿಂದ ೧೦ ಕಿಲೋ ಮೀಟರ್‌ವರೆಗೆ (ಮೊದಲ ಹಂತಕ್ಕೆ ಜಾಸ್ತಿ ಮಾಡಿಲ್ಲ) ಪ್ರಯಾಣ ಮಾಡತಕ್ಕ ಶೇಕಡ ೭೫ರಷ್ಟು ಜನರಿಗೆ ಏರಿಸಿರತಕ್ಕ ದರವನ್ನು ದಯವಿಟ್ಟು ಕಡಿಮೆ ಮಾಡಲೇಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ನೀವು ಮಾಡಿರುವ ಕ್ರಮ ತಪ್ಪು. ಇದರಲ್ಲಿ ಮತ್ತೊಂದು ಮಾತನ್ನು ಹೇಳಬೇಕಾಗಿ ಬರುತ್ತದೆ. ಈಗಾಗಲೇ ವಿದ್ಯಾರ್ಥಿಗಳಿಗೆ, ಜರ್ನಲಿಸ್ಟ್‌ಗೆ ಕನ್‌ಸೆಷನ್ ಕೊಟ್ಟಿದ್ದೀರಿ. ಅದೇ ರೀತಿ ಬೆಂಗಳೂರು ಹೊರವಲಯದಲ್ಲಿರತಕ್ಕ ಅನೇಕ ಸಣ್ಣ ಸಣ್ಣ ಕಾರ್ಖಾನೆಯ ಕಾರ್ಮಿಕರುಗಳಿಗೂ ಕನ್‌ಸೆಷನ್ ಕೊಡಬೇಕೆಂದು ಹೇಳುತ್ತೇನೆ. ದೊಡ್ಡ ಕಾರ್ಖಾನೆಯ ಕಾರ್ಮಿಕರುಗಳು ತಮ್ಮ ತಮ್ಮ ಕಾರ್ಖಾನೆಯ ಬಸ್ಸುಗಳಲ್ಲಿ ಹೋಗುತ್ತಾರೆ. ಬಿ.ಟಿ.ಎಸ್. ಮುಖಾಂತರ ಹೋಗತಕ್ಕ ಸಣ್ಣ ಸಣ್ಣ ಕಾರ್ಖಾನೆಯ ಕಾರ್ಮಿಕರಿಗೆ ಕನ್‌ಸೆಷನ್ ಕೊಡಬೇಕೆಂದು ಹೇಳುತ್ತೇನೆ. ಹಾಗೆಯೇ ಮಧ್ಯಮ ಮತ್ತು ಕೆಳವರ್ಗದ ಸರ್ಕಾರಿ ನೌಕರರಿಗೂ ಕೂಡ ಈ ಒಂದು ಕನ್‌ಸೆಷನ್ ಅನ್ನು ಕೊಟ್ಟರೆ ದರಗಳ ಹೆಚ್ಚಳವು ಸಾಮಾನ್ಯವಾಗಿ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ತಗಲುವುದಿಲ್ಲ ಮೊದಲ ೪ ಹಂತದ ದರವನ್ನು ಕಡಿಮೆ ಮಾಡಿದರೆ ಹೆಚ್ಚು ಮಂದಿ ಒಪ್ಪುತ್ತಾರೆ. ಮಾನ್ಯ ರಾಮದೇವರ್‌ರವರು ಹೇಳಿದ ಹಾಗೆ ಚಳುವಳಿಗೆ ಅವಕಾಶ ಕೊಡಬಾರದು. ಚಳುವಳಿ ಪ್ರಾರಂಭಿಸುವುದು ಸುಲಭವಾಗುತ್ತದೆ, ಆದರೆ ಅದು

ಮುಂದುವರಿದರೆ ಆದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಆದಕ್ಕೆಲ್ಲ ಅವಕಾಶ ಕೊಡದೆ ನಾವು ಹೇಳಿದಷ್ಟಕ್ಕೆ ಕೆಲವರು ಅಂಶಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಮತ್ತೊಮ್ಮೆ ಎನು ಸಮಸ್ಯೆಲ್ಲ ಸೇರಿಸಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ ಆದೇ ರೀತಿ ಮಾಡಬೇಕೆಂದು ಹೇಳುತ್ತೇನೆ.

† ಶ್ರೀಮೈಖೇಲ್ ಬಿ. ಫರ್ನಾಂಡೀಸ್ (ಭಾರತೀನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ಪೆಟ್ರೋಲ್ ಬೆಲೆ ಜಾಸ್ತಿಯಾಯಿತು. ಕಾರ್ಮಿಕರಿಗೆ ವೇತನ ಜಾಸ್ತಿ ಕೊಡಬೇಕು ಹೀಗೆ ನಾನಾ ಕಾರಣಗಳನ್ನು ಹೇಳುತ್ತಾ ಆದನ್ನೆಲ್ಲ ಸಾಮಾನ್ಯ ಜನರ ಮೆ ಲೆ ಹಾಕುವುದು ಒಂದು ಪದ್ಧತಿಯಾಗಿದೆ ಬಸ್ಸುಗಳಲ್ಲಿ ಪ್ರಯಾಣಮಾಡುವವರು ನಿಜವಾಗಿಯೂ ಸಾಮಾನ್ಯ ಜನರಂ. ಅಧಿಕಾರಿಗಳಾಗಲಿ, ಚುನಾಯಿತರಾಗಲೀ ಮಾಡಿದ್ದನ್ನು ನೋಡಿಲ್ಲ. ಅವರಿಗೆ ಕ್ಯೂನಲ್ಲಿ ನಿಂತುಕೊಂಡು ಬರುವುದಕ್ಕೆಲ್ಲ ಸಮಯವಿರುವುದಿಲ್ಲವಾದ್ದರಿಂದ ಆದು ಸಾಧ್ಯವಾಗುವುದಿಲ್ಲ. ಅನೇಕ ದೇಶಗಳಲ್ಲಿ ಚಿಕ್ಕ ಪ್ರಮಾಣದ ಒಂದೇ ದರದಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಇಡೀ ನಗರವನ್ನೇ ಸುತ್ತಾಡಬಹುದು. ಅವರು ಆಗ ಗ್ಯಾ. ಪೆಟ್ರೋಲ್ ದರ ಜಾಸ್ತಿಯಾಯಿತೆಂದು ಬಸ್ಸಿನ ದರವನ್ನು ಜಾಸ್ತಿ ಮಾಡುವುದಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ, ಎಕ್ಸ್‌ಟ್ರಾ ಕಾಸ್ಟ್ ಏನು ತಗಲುತ್ತದೆ ಅದನ್ನು ಬೇರೆ ರೂಪದಲ್ಲಿ ಒದಗಿಸಬೇಕೇ ವಿನಹ ಜನಸಾಮಾನ್ಯರ ಮೇಲೆ ಹಾಕಬಾರದು ಎಂದು. ಸರ್ಕಾರ ಈ ರೀತಿ ಜನ ಸಾಮಾನ್ಯರ ಮೇಲೆ ಹಾಕುತ್ತಾ ಹೋದರೆ ಬೇರೆ ಉದ್ಯಮಗಳಲ್ಲಿ ಜೆಲೆ ಜಾಸ್ತಿಯಾಗಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಏಕೆಂದರೆ ಸರ್ಕಾರದ ಒಂದು ಉದಾಹರಣೆಯನ್ನು ಬೇರೆ ವರ್ತಕರು ಬಹಳ ಸುಲಭವಾಗಿ ಅನುಸರಿಸುತ್ತಾರೆ. ಅವರು ಜಾಸ್ತಿ ಮಾಡಿದ ಹಾಗೆ ನಾವೂ ಕೂಡ ಜಾಸ್ತಿ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ಮಾಡುವುದರಿಂದ ಎಲ್ಲಾ ಸರ್ಕಾರಿ ನೌಕರರಿಗೆ ಡಿ.ಎ. ಜಾಸ್ತಿ ಕೊಡಬೇಕಾಗುತ್ತದೆ. ಆದ್ದರಿಂದ ಈ ಒಂದು ಪದ್ಧತಿಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಇನ್ನು ಫಿಲ್ಫಿರೇಜ್ ಆಗುವುದನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೆದುಕೊಳ್ಳುತ್ತಿಲ್ಲ. ಇದನ್ನು ಕಂಟ್ರೋಲ್ ಮಾಡಿದರೆ ರೇಟನ್ನು ರೆಡ್ಯೂಸ್ ಮಾಡಬಹುದು. ಆ ದರದಲ್ಲೇ ಎಫಿಷಿಯಂಟ್ ಆಗಿ, ಎಕನಾಮಿಕ್ ಆಗಿ ರನ್ ಮಾಡಬಹುದು. ಕೊನೆಯಲ್ಲಿ ಮತ್ತೊಂದು ಸಲಹೆ ಏನೆಂದರೆ, ಕೆಲವರು ನಿರುದ್ಯೋಗಿ ಪದವೀಧರರುಗಳೇನಿದ್ದಾರೆ ಅವರದ್ದೇ ಒಂದು ಸಹಕಾರ ಸಂಘವನ್ನು ಮಾಡಿ ಪ್ರಾಯೋಗಿಕವಾಗಿ ಅವರಿಗೆ ಬಸ್ಸುಗಳನ್ನು ಓಡಿಸಲು ರನ್ನಿಂಗ್ ಕಾಸ್ಟ್ ಮತ್ತು ಮೈಂಟೆನೆನ್ಸ್ ಕಾಸ್ಟ್ಟನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟು ಅವರು ಹೇಗೆ ನಡೆಸಿಕೊಂಡು ಹೋಗುತ್ತಾರೆಂಬುದನ್ನು ನೋಡಬಹುದು. ಆದರಿಂದ ಎಲ್ಲರಿಗೂ ಅನುಕೂಲ ಮತ್ತು ಒಂದು ಹೊಸ ಮಾದರಿಯಲ್ಲಿ ಟ್ರಾನ್ಸ್‌ಪೋರ್ಟ್ ಸಿಸ್ಟಂ ಅನ್ನು ನಡೆಸಲಿಕ್ಕೆ ಸಾಧ್ಯವಾಗಬಹುದೆಂದು ನನ್ನ ಸಲಹೆ.

† SRI A. LAKSHMISAGAR (Chickpet).—Sir, I will cover those points which have not been so far covered by my friends. Here is the chart in my hand of "The Progress at a Glance of the KSRTC". I will only refer to one point here as regards revision of fares during the last 15 years from 1962 till now. there have been revision of fares seven times.

There was revision of fares in 1962 and also in 1966. Upto 1972 there was no revision as per this progress report. There was revision in 1973, May 1974 and again in 1975. Then the revision made in 1979. So, there has been frequent revision of fares in the last 5-6 years. This must be borne in mind by the Hon. Minister for Transport and he must give satisfactory reply to it.

Then the last point is that the Hon. Minister for Transport has been singled out for severest indictment of the KSRTC in the budget speech of the Finance Minister. I will read only one sentance :

"...The profitability has been steadily going down. The Corporation has major problems of fleet with etc.,

MR SPEAKER.—(Let the hon. member be brief.)

SRI A. LAKSHMISAGAR.—It further says :

".. large scale absenteeism among employees as well as management problems."

There are some of the maladies the KSRTC suffering from. The Minister, while making reference to this problem has not been able to touch upon this matter and say what action they are going to take to improve the situation. Easiest thing in every venture or Corporation, is to raise the fare at the cost of the production. The more difficult thing is to run the Corporation economically and profitably. in this regard the Minister has miserably failed. This has reference to another statement which the Hon. Chief Minister has made in Mercara in the presence of the Minister for Transport. This is the severest attack on the Minister and what happens to the problem, the Minister has not been able to enlighten this House. Therefore my appeal would be what measure of economy and what measures for betterworking of the Corporation he has ordered during the short period he has been holding the portfolio ? He has not been able to place those things before this House. This is the main crux of the problem, on which I would like the Minister to address in this House.

†ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ರಾಜಶೇಖರರು, ಶ್ರೀಮಾನ್ ರಾಮಣ್ಣನವರು, ಶ್ರೀ ಚಂದ್ರಶೇಖರ್‌ರವರು, ಶ್ರೀ ಫರ್ನಾಂಡಿಸ್‌ರವರು ಮತ್ತು ಶ್ರೀ ಲಕ್ಷ್ಮೀಸಾಗರವರು ಏನು ಹೇಳಿದ್ದಾರೆ ಎಂಬುದನ್ನು ನಾನು ಕೇಳಿದ್ದೇನೆ. ಮಾನ್ಯ ಲಕ್ಷ್ಮೀ ಸಾಗರ್‌ರವರು ಏನು ಹೇಳಿದ್ದಾರೆ ಅದಕ್ಕೆ ನಾನು ಇನ್ನೊಂದು ಸಾರಿ ಉತ್ತರ ಕೊಡುತ್ತೇನೆ. ನಮ್ಮ ಇಲಾಖೆಯ ಬೇಡಿಕೆಗಳ ಮೇಲೆ ಇಲ್ಲಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಸಾರಿಗೆ ಕಾರ್ಪೋರೇಷನ್‌ಗೆ ಎಷ್ಟು ವರ್ಷದಿಂದ ನಷ್ಟವಾಗಿದೆ, ಅದಕ್ಕೆ ಏನು ಕಾರಣ ಎಂಬುದನ್ನು ನಾನು ಈಗ ತಿಳಿಸುತ್ತೇನೆ. ಏಕೆಂದರೆ ನಾನು ಇಲಾಖೆಯ ಮಂತ್ರಿಯಾಗಿ ಒಂದು ವರ್ಷವಾಯಿತು. ಈ ಕಾರ್ಪೋರೇಷನ್‌ಗೆ ೧೫ ವರ್ಷಗಳಿಂದ ನಷ್ಟವಾಗುತ್ತಿದೆ, ಇದಕ್ಕೆ ನಾನಾ ತರಹದ ಕಾರಣಗಳು ಇವೆ. ಈ ಬಗ್ಗೆ ಇದೇ ಸದನದಲ್ಲಿ ಮುಂದೆ ಹೇಳುತ್ತೇನೆ. ಮುಖ್ಯವಾಗಿ ಮಾನ್ಯ ರಾಜಶೇಖರರವರು ಬಹಳ ಬುದ್ಧಿವಂತರು ಇದ್ದಾರೆ ; ಅವರ ಪರಿಚಯ ನನಗೆ ಬಹಳ ವರ್ಷದಿಂದ ಇದೆ ; ಅವರು ಮಾತನಾಡುವಿಕಾದರೆ ಸಮಾಧಾನವಾಗಿ ಮಾತನಾಡತಕ್ಕಂಥವರು, ಇವತ್ತು ಬಹಳ ಜೋರಾಗಿ ಮಾತನಾಡಿದರು. ಅವರು ಬಹಳ ಬೇಸರದಿಂದ ಆ ರೀತಿ ಮಾತನಾಡಿಬಹುದು. ಬಸ್‌ಗಳಲ್ಲಿ ನಾನು ಅವರಿಗಿಂತ ಹೆಚ್ಚಾಗಿ ತಿರುಗಾಡುತ್ತಿದ್ದೇನೆ ಈಗ ಅದು ಕಡಿಮೆಯಾಗಿದೆ, ಬಸ್ ದರವನ್ನು ಹೆಚ್ಚು ಮಾಡಿರುವುದರ ಬಗ್ಗೆ ನನ್ನ ಆನೆಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಹೇಳಬಯಸುವುದೇನೆಂದರೆ ಇದರಲ್ಲಿ ನಾನು ಮೊದಲೇ ಹೇಳಿದ ಹಾಗೆ ಲಾಭ ಸಂಪಾದನೆ ಮಾಡಬೇಕೆನ್ನುವ ದೃಷ್ಟಿ ಇಲ್ಲವೇ ಇಲ್ಲ. ಮಾನ್ಯ ಶಾಮಣ್ಣನವರು. ಮಾತನಾಡತಕ್ಕಂಥ ಕಾಲದಲ್ಲಿ ಹಿಂದೆ ಬಸ್ ಫೇರ್ ೧೫ ಆಣೆ ೨ ಆಣೆ ಇತ್ತು ಎಂದು ಹೇಳಿದರು. ಆಗ ಪೆಟ್ರೋಲ್ ಬೆಲೆ ಕಡಿಮೆ ಇತ್ತು ; ಒಂದು ಬಸ್ ೧೦೦೦ ರೂಪಾಯಿಗೆ ಸಿಕ್ಕುತ್ತಿತ್ತು. ಆದರೆ ಈಗ ಒಂದು ಬಸ್ಸನ್ನು ರೋಡಿಗೆ ತರಬೇಕಾದರೆ ಸುಮಾರು ೨ ಲಕ್ಷ ರೂಪಾಯಿಗಳು ತಗುಲುತ್ತವೆ.

ಶ್ರೀ ಟಿ. ಆರ್. ಶಾಮಣ್ಣ —ಸ್ವಾಮಿ ಹಿಂದೆ ಬಸ್ ಫೇರ್‌ಗಾಗಿ ಸರಾಸರಿ ೬೦ ರೂಪಾಯಿ ಗಳನ್ನು ಕೊಡುತ್ತಿದ್ದೆವು ; ಈವತ್ತು ೧,೨೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ.

ಶ್ರೀ ಆರ್. ಗುಂಡೂರಾವ್.— ಅದನ್ನು ನೀವು ಕೊಡಲೇಬೇಕು ; ಏಕೆಂದರೆ ಸಿಬ್ಬಂದಿಯವರಿಗೆ ಸಂಬಳ ಜಾಸ್ತಿ ಕೊಡಬೇಕು. ಅವರಿಗೆ ಯೂನಿಫಾರಂ ಕೊಡಬೇಕು. ರೈನ್‌ಕೋಟ್ ಕೊಡಬೇಕು. ಷೂ ಕೊಡಬೇಕು ಕಾರ್ಮಿಕ ಕಾಯಿದೆಯಲ್ಲಿ ಏನೇನು ಕೊಡಬೇಕೆಂದು ಇದೆಯೋ ಆ ಸವಲತ್ತುಗಳ ಬೇಕು. ಆದ್ದರಿಂದ ಡೀಸಲ್, ಪೆಟ್ರೋಲ್ ಬೆಲೆ ಹೆಚ್ಚಿಸಿದ ಮಾತ್ರಕ್ಕೆ ನಾವು ಬಸ್ ಛಾರ್ಜು ನ್ನೆಲ್ಲಾ ಕೊಡ ಜಾಸ್ತಿ ಮಾಡಿದ್ದೇವೆ ಅಂತ ಅಲ್ಲ ; ಆಗಲೇ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಬಸ್ ಚಾರ್ಜ್ ಜಾಸ್ತಿ ಮಾಡಬೇಕೆಂದು ಹೇಳಿ ಸರ್ಕಾರ ಮೊದಲೇ ಯೋಚನೆ ಮಾಡಿತ್ತು. ಆದರೆ ಇದನ್ನು ಹೇಗೆ ಮಾಡಬೇಕು, ಯಾವತರಹ ಮಾಡಬೇಕು ಎಂಬ ವಿಚಾರ ಬಂದಾಗ ಅನೇಕ ಸಾರಿ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಎಲ್ಲಾ ವಸ್ತುಗಳ ಬೆಲೆಗಳು ಹೆಚ್ಚಿರುವುದರಿಂದ ಕಾರ್ಪೊರೇಷನ್‌ಗೆ ವಿಪರೀತ ನಷ್ಟವಾಗುತ್ತಾ ಇರುವುದರಿಂದ. ಇದನ್ನು ನಡೆಸುವುದಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿಯಿಂದ ಬಸ್ ಚಾರ್ಜನ್ನು ಜಾಸ್ತಿ ಮಾಡಬೇಕು ಎನ್ನುತಕ್ಕಂಥ ವಿಚಾರ ಸರ್ಕಾರ ದವರ ಮನಸ್ಸಿಗೆ ಬಂದು ಈ ರೀತಿ ಜಾಸ್ತಿ ಮಾಡಬೇಕಾಯಿತೇ ಹೊರತು ಸಾರ್ವಜನಿಕರಿಗೆ ತೊಂದರೆ ಕೊಡಬೇಕು ಅಂತ ಅಲ್ಲ. ಇವತ್ತಿನದಿವಸ ಕಾರ್ಪೊರೇಷನ್‌ನಲ್ಲಿ ೩೨ ಸಾವಿರ ಜನ ಕೆಲಸಗಾರರು ಇದ್ದಾರೆ. ೪ ಸಾವಿರ ಬಸ್‌ಗಳು ಇವೆ. ಇವತ್ತು ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿರುವುದಲ್ಲಿ ಸರಿಯೋ ತಪ್ಪೋ ಎನ್ನುವ ಬಗ್ಗೆ ನಾನು ಏನನ್ನು ಹೇಳುವುದಕ್ಕೆ ಬರುವುದಿಲ್ಲ. ಆದರೆ ನಮ್ಮಲ್ಲಿ ಜನಸಂಖ್ಯೆ ಯಾವತರಹ ವಿರುತ್ತಿದೆಯೋ ಜನಸಂಖ್ಯೆ ವಿರುತ್ತಿರುವುದಕ್ಕೆ ಸರಿಯಾಗಿ ಬಸ್‌ಗಳ ಸಂಖ್ಯೆ ಏರಲಿಲ್ಲ ಇದಕ್ಕೆ ಕಾರಣ ಇದೆ. ಅದೇನೇ ಇದ್ದರೂ ಮಾನ್ಯ ಸದಸ್ಯರೊಬ್ಬರು ಇದರಲ್ಲಿ ಪಿಲ್‌ಫರೆ ಜ್ ಆಗುತ್ತದೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರ ವಿಫಲವಾಗಿದೆ ಎಂದು ಹೇಳಿದರು. ಇಲ್ಲಿ ಆಗತಕ್ಕಂಥ ಪಿಲ್ಫರೇಜನ್ನು ನಿಲ್ಲಿಸಬೇಕೆಂದು ಹೇಳಿ ನಾವು ಈಗಾಗಲೇ ಕಾರ್ಯಕ್ರಮವನ್ನು ಕೈಕೊಂಡಿ ದ್ದೇವೆ. ಇದರಲ್ಲಿ ಅನೇಕ ಜನರನ್ನು ಇಡಿದ್ದೇವೆ ಅವರು ಸಸ್ಪೆಂಡ್ ಆಗಿದ್ದಾರೆ. ಈ ಬಗ್ಗೆ ನಾವು ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಿದ್ದೇವೆ. ಇದನ್ನು ಪೂರ್ತಿಯಾಗಿ ನಿಲ್ಲಿಸುವುದಕ್ಕೆ ಏತಕ್ಕೆ ಸಾಧ್ಯವಾಗಲಿಲ್ಲ ಎಂದರೆ ನಮ್ಮಲ್ಲಿ ಬಸ್‌ಗಳ ಸಂಖ್ಯೆ ಕಡಿಮೆ ಇದೆ. ಇದರಲ್ಲಿ ೫೦ ಜನ ಕುಳಿತುಕೊಳ್ಳುವ ಬಸ್‌ನಲ್ಲಿ ಸುಮಾರು ೧೦೦ ಜನ ಕುಳಿತಿರುತ್ತಾರೆ. ಬಸ್‌ಗಳ ಸಂಖ್ಯೆ ಜಾಸ್ತಿ ಇಲ್ಲ. ರಾಷ್ಟ್ರಮಟ್ಟದಲ್ಲಿ ಬಸ್‌ಗಳು ಸಿಕ್ಕುತ್ತ ಇಲ್ಲ. ಲೈಲಾಂಡ್ ಮತ್ತು ಟಾಟಾ ಕಂಪನಿಯವರು ಬಸ್‌ಗಳನ್ನು ತಯಾರು ಮಾಡಿ ಇಡೀ ದೇಶಕ್ಕೆ ಸಪ್ಲೈ ಮಾಡಬೇಕಾಗಿದೆ. ಅವರು ಹೆಚ್ಚಿಗೆ ಪ್ರೊಡಕ್ಷನ್ ಮಾಡುತ್ತಾ ಇಲ್ಲ. ಈಗ ನಾವು ೮೦೦ ಬಸ್ ಗಳನ್ನು ತೆಗೆದುಕೊಂಡಿದ್ದರೂ ಪೂರ್ತಿಯಾಗಿ ಆದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ ಎಂದ್ಯ ಹೇಳುವುದಕ್ಕೆ ನಾನು ತಯಾರು ಇಲ್ಲ. ಏಕೆಂದರೆ ನಮಗೆ ಇನ್ನೂ ಬೇಕಾದಷ್ಟು ಬಸ್‌ಗಳು ಬೇಕಾ ಗಿವೆ. ಬೆಂಗಳೂರಿನ ನಗರದಲ್ಲಿ ತಾವು ಹೇಳಿದ ಹಾಗೆ ೮-೯ ಲಕ್ಷ ಜನರು ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಈ ೯ ಲಕ್ಷ ಜನರನ್ನು ೫೦೦ ಬಸ್‌ಗಳಲ್ಲಿ ಸಾಗಿಸಬೇಕಾಗಿದೆ ನಮ್ಮ ಬೆಂಗಳೂರು ನಗರ ಬೇರೆ ನಗರಗಳ ರೀತಿಯಲ್ಲಿ ಇಲ್ಲ. ಅಲ್ಲಿ ೪೯-೫೦ ಪರ್ಸೆಂಟ್‌ನಷ್ಟು ಜನರು ಎಲೆಕ್ಟ್ರಿಕ್ ಟ್ರೈನ್‌ಗಳಲ್ಲಿ ಪ್ರಯಾಣ ಮಾಡುತ್ತಾರೆ. ಇಲ್ಲಿ ಆ ತರಹ ಎಲೆಕ್ಟ್ರಿಕ್ ಟ್ರೈನ್ ಫೆಸಲಿಟೀಸ್ ಇಲ್ಲ. ಎಲ್ಲಾ ಜನರೂ ಬಸ್‌ಗಳ ಮೇಲೆ ಅವಲಂಬಿಸಿದ್ದಾರೆ. ಬಸ್‌ಗಳಲ್ಲಿ ಚೆಕಿಂಗ್ ಇನ್ಸ್‌ಪೆಕ್ಟರ್ ಟಿಕೆಟ್ ಚೆಕ್ ಮಾಡುವುದಕ್ಕೂ ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಹೆಚ್ಚಿನ ಜನ ಬ್ಯಾಂಕ್‌ಗಳಲ್ಲಿ, ಕಾರ್ಖಾನೆ ಗಳಲ್ಲಿ, ಪ್ರೈವೇಟ್ ಫರ್ಮ್‌ಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ ; ಅವರು ಟೈಮ್‌ಗೆ ಸರಿಯಾಗಿ ಕಚೇರಿಗೆ ಹೋಗಬೇಕಾಗಿರುತ್ತದೆ- ಬಸ್‌ಗಳಲ್ಲಿ ಹೆಚ್ಚಿನ ಜನ ತುಂಬಿರುತ್ತಾರೆ. ಕಂಡಕ್ಟರ್ ಎಲ್ಲರ ಹತ್ತಿರ ದುಡ್ಡು ವಸೂಲು ಮಾಡುವಷ್ಟರಲ್ಲಿ ಎಷ್ಟೋ ಮಂದಿ ಇಳಿದು ಹೋಗಿಬಿಡುತ್ತಾರೆ. ಈ ಬಗೆ ತಾವು ಹೇಳಿರುವುದೆಲ್ಲಾ ನಿಜವಲ್ಲ ; ಆದರಲ್ಲಿ ಕೆಲವಾರು ವಿಷಯಗಳಲ್ಲಿ ಸತ್ಯ ಇದೆ. ಇದನ್ನು ಸರಿ ಪಡಿಸುವುದಕ್ಕೆ ನಾವು ಬೇಕಾದಷ್ಟು ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಿದ್ದೇವೆ. ನಮ್ಮ ಮಾನ್ಯ ಫರ್ನಾಂಡಿಸ್‌ರವರು ಮಾತನಾಡುತ್ತಾ ಟಿಕೆಟ್ ಇಲ್ಲದೇ ಪ್ರಯಾಣ ಮಾಡುತಕ್ಕಂಥವರನ್ನು ಜೈಲಿಗೆ ಕಳಿಸಿ, ಈ ಬಗ್ಗೆ ಕಾನೂನು ಮಾಡಿ ಕಾನೂನು ಇಲ್ಲ, ಎಂದು ಹೇಳಿದರು. ಈ ಕಾನೂನನ್ನು ಬಹಳ ಹಿಂದೆಯೇ ಮಾಡಿದ್ದೇವೆ ; ಆದು ಈಗಲೂ ಇದೆ. ಅದನ್ನು ಇನ್ನೂ ಕಠಿಣವಾಗಿ ಮಾಡಬೇಕು ಎಂದರೆ ಆದನ್ನು ಬೇಕಾದರೆ ನಾವು ಪರಿಶೀಲನೆ ಮಾಡಬಹುದು.

ಆದರೊಂದರಿಂದಲೇ ಎಲ್ಲಾ ಪೂರ್ತಿಯಾಗುತ್ತದೆ ಎಂದು ಏನು ಹೇಳಲಾಗುವುದಿಲ್ಲ. ಮಾನ್ಯ ಶಾವಣ್ಣನವರಿಗೆ ಮತ್ತು ರಾಜಶೆಖರ್‌ನವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತು. ಆದರೇಕೋ ಅವರೇ ನನ್ನೂ ಹೆಳಲಿಲ್ಲ. ಇಲಾಖೆ ಬೇಡಿಕೆ ವಿಚಾರ ಬಂದಾಗ ಹೇಳುವರೋ ಏನೋ. ಬಹಳ ಸಂತೋಷ ಬಸ್ ದರ ಜಾಸ್ತಿ ಮಾಡಿರುವುದು ಇವತ್ತಿನ ಸನ್ನಿವೇಶಕ್ಕನುಗುಣವಾಗಿದೆಯೇ ಹೊರತು ಸಂಸ್ಥೆಗೆ ಲಾಭ ಬರಿಸಬೇಕೆನ್ನುವ ದೃಷ್ಟಿಯಿಂದಲ್ಲ. ಮಾನ್ಯ ಸದಸ್ಯರು ಪುನಃ ಅವರನ್ನೆಲ್ಲಾ ಕರೆದು ಈ ಬಗ್ಗೆ ಮಾತನಾಡಬೇಕೆಂದು ತಿಳಿದರೆ. ಈ ವರ್ಷದಲ್ಲಿ ಸುಮಾರು ನಾಲ್ಕು ಸಾರಿ ಅವರನ್ನು ಕರೆದು ಚರ್ಚೆ ಮಾಡಿಬೇಕೆಂದು ನನಗನ್ನಿಸುತ್ತದೆ. ಈ ಅಧಿವೇಶನ ಮುಗಿದ ಮೇಲೆ, ತಮ್ಮನ್ನು ಕರೆಯುತ್ತೇನೆ. ಒಟ್ಟಿಗೆ ಊಟದ ವ್ಯವಸ್ಥೆ ಮಾಡೋಣ : ಚರ್ಚೆ ಮಾಡೋಣ. ಆದರಲ್ಲೇನೂ ತಾವು ಬೇಸರ ಮಾಡಿಕೊಳ್ಳುವುದು ಬೇಡ.

೩-೩೦ ಪಿ. ಎಂ.

Sri S. S. Arakeri resigning from the Janatha Party Announcement.

MR. SPEAKER.—I have received a letter dated 5th April 1979 from Sri S. S. Arakeri, Member, Legislative Assembly, (Janatha Party) stating that he has resigned from the primary membership of the Janatha Party and also from the Secretaryship of the Janatha Legislatue Party on 4th April 1979.

Seperate seating arrangements will be made.

SRI S. R. BOMMAI.—Has he resigned from the membership of this House ? Let him resign and get re-elected. That would be a most democrat c way of doing it.

SRI K. H. RANGANATH,—He has requested for allotment of seperate seat.

MR. SPEAKER.—He has requested me to make necessary arrangements to allot a seat for him, as he is independent.

SRI S. R. BOMMAI.—He should resign from the membership and get elected as independent or from any other party.

Papers Laid on the Table

SRI K. H. RANGANATH (Minister for Agriculture and Parlimantary Affairs) Sir, on behalf of the Hon'ble Chief Minister I beg to lay.—

Report of the Krishnan Commission of Inquiry, Bangalore under Sub-Section (4) of Section 3 of the Commission of Inquiry Act 1952 (Central Act 60 of 1952)

Sir, on behalf of the Minister for Revenue, I beg to lay :

i) Order No. RD 24 EST 79, dated 23rd March, 1979.